ಮೈಸೂರ ಗಿಜಿಟ.

ಸರ್ಕಾರದಿಂದ ಛಾಯಿಷ ಆದ್ದು.

ಬೆಂಗಳೂರು, ಶನಿವಾರ, ಫಿಬ್ರವರೀ ತಾ॥ 19, ಸ್ರ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

2 ನೇ ಭಾಗ.

ಜುಡಿಷಿಯಲ್ ಕಮ್ಮಿಷನರ್ ವಗ್ಗೈರೇರಿಂದ ಕೊಡೋಣಾದ ಇಸ್ತಿಹಾರ್‌ಗಳು.

ಜುಡಿಷಿಯಲ್ ಇಲಾಖಾ.

ಇಸ್ತಿಹಾರ್‌ಗಳು.

ತಾರೀಖು 18ನೇ ಫಿಬ್ರವರೀ 1876.

ಮೈಸೂರು ಧೊರೆಗಳ ಶೀಮೆಯ ಜುಡಿಷಿಯಲ್ ಕಮ್ಮಿಷನರವರ ಕೋರ್ಟಿನಲ್ಲಿ ಸಿವಿಲ್ ಮತ್ತು ಕ್ರಿಮಿನಲ್ ಅಪ್ಪೀಲ್‌ಗಳು ಮತ್ತು ಫೂಟ್ ಅರ್ಜೀಗಳು ಸಹ ಹಿಯರಿಂಗ್ ಮಾಡಲ್ಪಡುವ ತಾರೀಖುನ್ನು ತೋರಿಸುವ ತಖ್ತಾ.

ನಂಬರ್	ಅಪ್ಪೀಲ್ವಾದಿಗಳು ಮತ್ತು ಅರ್ಜೀದಾರರ ಹೆಸರು	ಪ್ರತಿವಾದಿಗಳ ಹೆಸರು	ಹಿಯರಿಂಗ್ ತಾರೀಖು.
ಕೊ. ಸ್ಪಿ. ಅ. ೩	ಹಜಾಮರ ಹುಚ್ಚಾ ..	ಕಾಳೇಗೌಡ ..	೨೦ನೇ ಫಿಬ್ರವರೀ
ಫೂ. ಅ. ೨	ಪಾರ್ವತಿಬಾಯಿ ..	ಕೃಷ್ಣನಾರಾಯಣ ದಾಸ್ ..	ಡಿಟೋ
	ಆರ್ಜೀಗಳು		
..	ರುದ್ರಪ್ಪ ..	.. ..	ಡಿಟೋ
..	ರಾಜಗೋಪಾಲೈಯಂಗಾರ್ ..	.. ..	ಡಿಟೋ
..	ದೊಡ್ಡಮ್ಮ ..	.. ..	ಡಿಟೋ
..	ಶ್ರೀನಿವಾಸಾಚಾರಿ .	.. ..	ಡಿಟೋ
..	ಕೃಷ್ಣಪ್ಪಾಜಿ ..	.. ..	ಡಿಟೋ
..	ಮಿನ್ನಾ ಮಿಯ ..	.. ..	ಡಿಟೋ
ಸ್ಪಿ. ಅ. ೬	ರಾಮಸ್ವಾಮಿಕಟ್ಟಿ ..	ಗೋವಿಂದಪ್ಪ ವಗ್ಗೈರೇ ..	೨ನೇ ಮಾರ್ಚೀ
ಸ್ಪಿ. ಅ. ೫	ಪಾದಷಾ ವೊಹದೀರ್ ಷಾಖಾದ್ರಿ ..	ಬುರ್ಹಷಾ ಖಾದ್ರಿ ವಗ್ಗೈರೇ ..	ಡಿಟೋ
ಸ್ಪಿ. ಅ. ೪	ಹನುಮಂತೈಯ ..	ನರಸಿಹ್ಮಯ್ಯ ..	ಡಿಟೋ
ಕೊ. ಸ್ಪಿ. ಅ. ೨	ಶಾಂತಮಲ್ಲೈಯ ..	ಮಾಗಪ್ಪೈಯ ವಗ್ಗೈರೇ ..	ಡಿಟೋ
ಫೂಟ್ ಅ. ೫	ತನಿಯಾಜಲಶೆಟ್ಟಿ ..	ವೆ॥ ಹೇಜ್ ..	ಡಿಟೋ
ಅಪ್ಪೀಲ್ ೧	ಲಕ್ಷ್ಮಣ್ಣೈಯ ..	ಶ್ರೀಧರಲಕ್ಷ್ಮೀನರಸಿಹ್ಮಶಾಸ್ತ್ರಿ ವಗ್ಗೈರೆ	೩ನೇ ಡಿಟೋ
ಸ್ಪಿ. ಅ. ೩	ಯಜೂರೈಯ ..	ತಿಪ್ಪೈಯ ..	ಡಿಟೋ
ಸ್ಪಿ. ಅ. ೯	ಶೇಷಭಟ್ಟಾ ..	ವೆಂಕಟನಾರಣಪ್ಪ ..	೧೪ನೇ ಡಿಟೋ
ಫೂಟ್ ಸ್ಪಿ. ಅ. ೫	ಸಿದ್ದಪ್ಪ, ಗಾರಡಿಯರ್ ತೋಟಣ್ಣಾ ..	.. ..	ಡಿಟೋ
ಫೂಟ್ ಸ್ಪಿ. ಅ. ೪	ಸೂರಪ್ಪ ..	ರಾಮಾಭಟ್ಟಾ ..	ಡಿಟೋ
ಸ್ಪಿ. ಅ. ೪	ನಾಮಗಿರಿಯಮ್ಮ ..	ಶ್ರೀನಿವಾಸರಾಘವಾಚಾರಿ ವಗ್ಗೈರೇ ..	೧೬ನೇ ಡಿಟೋ

96

ತಾರೀಖು 12ನೇ ಫಿಬ್ರವರೀ 1876.

ಇದರಿಂದ ತಿಳಿಯಪಡಿಸುವದೇನಂದರೆ, ತುಮಕೂರು ಡಿಸ್ಟ್ರಿಕ್ಟು ಜುಡಿಷಿಯಲ್ ಅಸಿಸ್ಟೆಂಟ್ ಕೋರ್ಟು 1876ನೇ ಇಸವಿ ಮಾರ್ಚೀ ಗುರ್ಸೀ ಲಾಗಾಯತು ಏಪ್ರೆಲ್ ಆಖೈರ್ ವರಿಗೆ ಮುಚ್ಚಲ್ಪಡುತ್ತೆ.

2. ಹಾಂಗೆ ಮುಚ್ಚಲ್ಪಟ್ಟ ಕಾಲದಲ್ಲಿ ಕೋರ್ಟು ಶಿರಸ್ತೇದಾರ್ರು ಅಥವಾ ಹೆಡ್‌ಮುನಷಿ ಪ್ರತಿಸೋಮವಾರ ವ ಬೃಹಸ್ಪತಿವಾರ ಈ ಎರಡು ದಿನಗಳಲ್ಲಿ ಆಫೀಸಿಗೆ ಬರುತ್ತಾರೆ, ಯಾವ ಬಗ್ಗೆ ಅಂದರೆ;—

(a) ಕಕ್ಷಿಗಾರ್ರು ಹಾಜರ್ಮಾಡಲಿಚ್ಛೈಸುವ ದಾವೆಗಳನ್ನು, ಅರ್ಜೀಗಳನ್ನು, ಅಮಲ್‌ಜಾರೀ ವಗ್ಗೈರೇ ಬಗ್ಗೆ ಅರ್ಜೀಗಳನ್ನು, ತೆಗದುಕ್ಕೊಳ್ಳಲಿಕ್ಕೂ,

(b) ಸಾದರಾತೀ ಬಗ್ಗೆ ಇತರ ಕೋರ್ಟುಗಳಿಂದ ಬರುವ ಸಮ್ಮನ್ಸುಗಳು, ವ ಇತರ ಪ್ರೊಸೆಸ್‌ಗಳು, ಇವುಗಳನ್ನು ಜಾರೀಲಿ ತರತಕ್ಕ ಬಗ್ಯೂ,

(c) ಅಪ್ಪೀಲಾದ ಮೊಕದ್ದಮೆಗಳಲ್ಲಿ ರಿಕಾರ್ಡ್ ರವಾನೆಬಗ್ಗೆ ಕಮ್ಮಿಷನರ್‌ರವರ ಕೋರ್ಟ್‌ನಿಂದ ಬರುವ ಹುಕ್ಕುಂಗಳಿಗೆ ನಿಗೇ ಕೊಡತಕ್ಕ ಬಗ್ಯೂ, ಮತ್ತು.

(d) ಕಕ್ಷಿಗಾರ್ರು ಕೇಳಿಕ್ಕೊಳ್ಳುವ ಜಡ್ಜ್‌ಮೆಂಟ್, ಡಿಕ್ರೀ, ವ ಹುಕ್ಕುಂ ಇವುಗಳ ಸ್ಟೈಮೊಹರ್‌ನಿಸಿ ಇರುವ ಕಾಪೀಗಳನ್ನು ಕೊಡಲಿಕ್ಕೂ,

3. ಡಿಕ್ರೀ ಬಾಬತು ಹಣಾ ಪಾವತೀ ಮಾಡಲಿಕ್ಕೆ ಆಪೇಕ್ಷಿಸುವ ಕಕ್ಷಿಗಾರ್ರು ಶಿರಸ್ತೇದಾರ್ರಿಂದ ಮಾಮೂಲ್ ಮೇರೆ ಡಿಪಾಜಿಟ್ ಆರ್ಡರ್ ಪಡೆದು ಡಿಸ್ಟ್ರಿಕ್ಟು ಟ್ರೆಜರೀಯಲ್ಲಿ ಹಣಾ ಪಾವತೀ ಮಾಡತಕ್ಕದ್ದೆಂತ ಆಜ್ಞಾಪಿಸಲ್ಪಟ್ಟಿರುತ್ತಾರೆ, ಅಂತಾ ಆರ್ಡರಿಗೆ ಶಿರಸ್ತೇದಾರ್ರು "ಫಾರ್ ಜುಡಿಷಿಯಲ್ ಅಸಿಸ್ಟೆಂಟ್" ಯೆಂಬದಾಗಿ ದಸ್ಕತ್ ಮಾಡತಕ್ಕದ್ದು.

4. ಕೋರ್ಟು ಹುಕ್ಕುಂನಿಂದ ತುಮಕೂರು ಸಿವಿಲ್ ಜೈಯಿಲ್‌ನಲ್ಲಿ ಇಡಲ್ಪಟ್ಟಿರುವ ಪ್ರತಿವಾದಿಗಳಿಗೆ ಭತ್ಯವನ್ನು ಅಡ್ವಾನ್ಸ್ ಕಟ್ಟತಕ್ಕ ಬಗ್ಗೆ ಅಪೇಕ್ಷಿಸುವ ಕಕ್ಷಿಗಾರ್ರು ಸ್ರ 1859ನೇ ಇಸವಿ 8ನೇ ನಂಬರ್ ಆಕ್ಟಿನ 276ನೇ ಸೆಕ್ಷನ್ ಪ್ರಕಾರ ತುಮಕೂರು ಜೈಯಿಲ್ ದರೋಗರಲ್ಲಿ ಪಾವತೀ ಮಾಡತಕ್ಕದ್ದು.

H. T. PRINSEP,
Offg. Jndl. Commr.

ಸರ್ವೇ ಮತ್ತು ಸೆಟಲ್‌ಮೆಂಟ್ ಇಲಾಖಾ.

ತಾರೀಖು 3ನೇ ಫಿಬ್ರವರೀ 1876.

ನಂ. 92.

ಇದರಿಂದ ಸರ್ವರಿಗೂ ತಿಳಿಯಪಡಿಸುವ ದೇನಂದರೆ, ತುಮಕೂರು ಡಿಸ್ಟ್ರಿಕ್ಟು ಮದ್ದಗಿರೀ ತಾಲ್ಲೂಕು ಸರ್ವೇ ಸೆಟಲ್‌ಮೆಂಟ್ ಫೈಸಲಾತಿಯು, 1876ನೇ ಇಸವಿ ಫಿಬ್ರವರೀ 20ನೇ ಮುಕ್ತಂ ಪುನಾರಿಗೆ ಪ್ರಾರಂಭಿಸಲ್ಪಡುವದು.

J. P. GRANT, *Major,*
Supt., Rev. Survey & Assessment,
Mysore.

ಫಾರೆಸ್ಟ್ ಇಲಾಖಾ.

ತಾರೀಖು 10ನೇ ಜನವರೀ 1876.

ಇದರಿಂದ ಪ್ರಸಿದ್ಧ ಪಡಿಸುವದೇನಂದರೆ,—ನಗರ ಡಿವೀಜ್ ಬಾಬತು ಈ ಕೆಳಗೆ ಬರುವ ತೇಗದ ವ ಇತರ ಮರಗಳ ದಿಮ್ಮೀಗಳು ಯಿದರಿಂ ತಿಳಿಸಲ್ಪಟ್ಟ ತಾರೀಖುಗಳೊಳಗೂ, ಸ್ಥಳಗಳೊಳಗೂ, ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವವು.